(2) 6ನೇ ರೂಲಿನ (ಬಿ) ಕ್ಲಾಜಿನ ಪಕ್ಕದಲ್ಲಿ ನಮೂದ್‌ಮಾಡಲ್ಪಟ್ಟ "ಪ್ಲಾನೆಗಳು, ಕಟ್ಟಣಗಳು, ಅಥವಾ ಜಮೀನ್‌ಗಳು ಇವುಗಳ ಮೇಲೆ ವಟ್ಟುಕೆಲಸಗಳಿಗಾಗಿಯಾಗಲಿ, ಬೆಳಕು ಪುಂಟುಮಾಡುವ ಬಗ್ಗೆ ಅಥವಾ ನೀರಾವರಿ ಕೆಲಸಗಳಿಗಾಗಿಯಾಗಲಿ ಅವುಗಳ ಸುಲೀಯಾನಾ ಹುಟ್ಟುವಳೀ ಪ್ರಕಾರ ತೆರಿಗೆಗಳು" ಯಂಬ ಮಾತುಗಳು ಬಿಟ್ಟು ಬಿಡಲ್ಪಡತಕ್ಕದ್ದು.

(3) 7ನೇ ರೂಲ್‌ನಲ್ಲಿ "ಖಾಲಿಪಡಿಸಿದ ಕಮ್ಮಿಷನರು ಯಾವ ತರಗತಿಗಳಿಗೆ ಕೇರಿಯಿರುತ್ತಾನೊ ಅಂಥಾ ತರಗತಿಗಳ" ಯೆಂಬು ಮಾತುಗಳಿಗೆ ಬದಲಾಗಿ "ಖಾಲಿಪಡಿಸಿದ ಕಮ್ಮಿರ್ಷರು ಯಾವ ತರಗತಿಗೆ ಪ್ರತಿನಿಧಿಯಾಗಿದ್ದನೊ ಅಂಥಾ ತರಗತಿಯ" ಯಂಬ ಮಾತುಗಳು ಕೇರಿಸತಕ್ಕದ್ದು.

(4) 9ನೇ ರೂಲ್‌ನಲ್ಲಿ "ಭರ್ತಿಯಾಗತಕ್ಕ" ಯಂಬ ಮಾತಿನ ಆಜೆಗೆ "ಅತನು ಕೇರಿರತಕ್ಕ ತರಗತಿಯ ಪ್ರತಿನಿಧಿಗಳಲ್ಲಿ" ಯಂಬ ಮಾತುಗಳು ಕೇರಿಸತಕ್ಕದ್ದು.

ಹುಕ್ಕುಂ ಬಮೋಜೀಬ

ಜೆಜ್. ವೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫ್.

ಸ್ರ 1884ನೇ ಇಸವಿ ಏಪ್ರೆಲ್ 2ನೇ ಮಕ್ಕುಂ ರೂಲ್‌ಆಫ್ ಪ್ರಾಕ್ಟೀಸ್ ನಂಬರ್ 32.

ವಾರಂಟು ವಿನಹಾ ಪೊಲೀಸ್ ಆಫೀಸರ್‌ಗಳು ದಸ್ತಗಿರಿ ಮಾಡತಕ್ಕ ಮೊಕದ್ದಮೆಗಳ ಕಿವಾಯಿ ಇತರ ಮೊಕದ್ದಮೆಗಳಲ್ಲಿ ಕ್ರಿಮಿನಲ್ ಕೋರ್ಟುಗಳಿಂದ ಕೊಡೋಣಾಗುವ ಪ್ರೊಸೆಸ್‌ಗಳ ಜಾರೀ ಬಗ್ಗೆ ಚಾರ್ಜುಮಾಡಬೇಕಾದ ರುಸುಂ ವಿಷಯದಲ್ಲಿ ಯೇರ್ಪಾಡಾದ ಇದರಡಿಯಿರುವ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರಾಗಲ್ಪಟ್ಟು, ಸ್ರ 1870ನೇ ಇಸವಿ ಕೋರ್ಟುಫೀಸ್ ಆಕ್ಟ್ 20ನೇ ಸೆಕ್ಷರ್ 2ನೇ ಕ್ಲಾಜ್ ಅನುಸರಿಸಿ ಫಾಯಿಷ್ ಮಾಡಲ್ಪಟ್ಟಿರುತ್ತೆ.

1. ಕ್ರಿಮಿನಲ್ ಕೋರ್ಟುಗಳಿಂದ ಕೊಡೋಣಾಗುವ ಪ್ರೊಸೆಸ್ ಜಾರೀ ಬಗ್ಯಾಗಿ ಯಿದರ ಸಂಗಡ ಲಗ್ಗತ್ತಾಡಿರುವ ಷೆಡ್ಯೂಲ್‌ಯಾನೆ ಪಟ್ಟಿಯಲ್ಲಿ ಕಂಡ ಮೇರಿಗೆ ಯಾವನು ಪ್ರೊಸೆಸ್ಸು ಕೊಡಬೇಕೆಂದು ಖಾಯಿಷ್ ಮಾಡುತ್ತಾನೋ ಅವನಿಂದ ರುಸುಂ ವಸೂಲ್ ಮಾಡತಕ್ಕದ್ದು, ಮತ್ತು ಅಂಥಾ ರುಸುಂ ವಾಯಿದೆ ಳಗಾಗಿ ಕೊಡುವ ವರಿಗೂ ಸದರೀ ಪ್ರೊಸೆಸ್ಸು ಜಾರೀ ಮಾಡಲ್ಪಡತಕ್ಕದ್ದಲ್ಲವು.

2. ಪ್ರೊಸೆಸ್ಸುಗಳನ್ನು ಕೊಡತಕ್ಕ ಕೋರ್ಟಿನವರು ಅನ್ಯಥಾ ಅಪ್ಪಣೆ ಮಾಡದೆ ಯಿರುವ ಪಕ್ಷಕ್ಕೆ ಈ ವರಿಗಿನಂತೆ ಯಲ್ಲಾ ಪ್ರೊಸೆಸ್ಸುಗಳೂ ಪೊಲೀಸಿನವರಿಂದ ಜಾರೀಯಾಗಲ್ಪಡತಕ್ಕದ್ದು.

3. ಯಲ್ಲಾ ಪ್ರೊಸೆಸ್ಸುಗಳೂ ಜಾರೀ ಆಗತಕ್ಕದ್ದು ಕೋರ್ಟಿನ ಹೆಡ್ ಮಿನಿಸ್ಟೀರಿಯಲ್ ಆಫೀಸರಿನ ವಿಚಾರಣೆಗೆ ವಳಪಟ್ಟಿರತಕ್ಕದ್ದು.

ಷೆಡ್ಯೂಲ್.

		ರೂ.	ಆ.	ಪೈ.
1.	ಪ್ರತಿವಾದಿಗೆ ಸರ್ವ್	0	8	0
	ಮತ್ತು ಪ್ರತಿ ಪೊಬ್ಬ ಜಾಸ್ತಿ ಪ್ರತಿವಾದಿಗೆ ಯೇಕ ಕಾಲದಲ್ಲಿ ಅಪೇಕ್ಷಿಸಿ ಅವನು ಆಜೂ ಬಾಜು ವಾಸಸ್ತನಾಗಿದ್ದರೆ.	0	4	0
2.	ಸಾಕ್ಷಿ ಸರ್ವ್	0	8	0
	ಮತ್ತು ಪ್ರತಿ ಜಾಸ್ತಿ ಸಾಕ್ಷಿಗೆ ಯೇಕ ಕಾಲದಲ್ಲಿ ಅಪೇಕ್ಷಿಸಿ ಅಂಥಾ ಸಾಕ್ಷಿಯು ಆಜು ಬಾಜು ವಾಸಸ್ತನಾಗಿ ಯಿದ್ದರೆ.	0	4	0
3.	ದಸ್ತಗಿರಿ ವಾರಂಟು ಬಗ್ಯೆ	1	0	0
4.	ಇತರ ವಿಧವಾಗಿ ವಿಧಿಸಲ್ಪಡದೆ ಯಿರುವ ನೋಟೀಸ್ ಆರ್ಡರ್ ಇಂಜಕ್ಷರ್ ಅಥವಾ ವಾರಂಟಿಗೆ.	0	8	0